ಆ) ಈ ಯೋಜನೆಗೆ ಮಂಜೂರಾತಿ ನೀಡಿದರೂ ಸಹ ಈವರೆಗೆ ಅನುಷ್ಠಾನಕ್ಕೆ ಬಾರದೆ ಇರಲು ಕಾರಣವೇನು;

ಇ) ಸದರಿ ಯೋಜನೆಯು ಯಾವಾಗ ಅನುಷ್ಠಾನಕ್ಕೆ ಬರಲಿದೆ ಹಾಗೂ ಈ ಯೋಜನೆಯಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದಂತಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

639(478) : ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಶಿರಸಿ ವಿಭಾಗದಿಂದ ಈಗ ಓಡುತ್ತಿರುವ ಒಟ್ಟು ಖಾಸಗಿ ಬಸ್‌ಗಳು ಎಷ್ಟು ಹಾಗೂ ಈ ಬಸ್‌ಗಳ ಮಾಲೀಕರು ಯಾರು;

ಆ) ಖಾಸಗಿ ಬಸ್ಸುಗಳನ್ನು ಓಡಿಸಲು ಇರುವ ನಿಯಮಗಳಾವುವು ಹಾಗೂ ಖಾಸಗಿ ಬಸ್ಸುಗಳನ್ನು ಓಡಿಸುವ ಮೊದಲು ಸರಕಾರ ಸಾರ್ವಜನಿಕರಿಗೆ ಸೂಚನೆ ನೀಡಿತ್ತೇ;

ಇ) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕುಗಳ ಗ್ರಾಮೀಣ ಭಾಗದಲ್ಲಿ ಬಸ್ಸುಗಳು ಸರಿಯಾಗಿ ಓಡಾಡದಿರುವುದು ಹಾಗೂ ಕೆಲವು ಮಾರ್ಗಗಳು ರದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಾಡಿಗೆ ಆಧಾರದ ಮೇಲೆ ಓಡುತ್ತಿರುವ ಖಾಸಗಿ ಬಸ್‌ಗಳ ಸಂಖ್ಯೆ. 103

ಮಾಲೀಕರುಗಳ ಹೆಸರು ಕೆಳಗಿನಂತಿದೆ:

1) ಶ್ರೀ ಕೆ. ಪದ್ಮಾಕರ ಪ್ರಭು 2) ಶ್ರೀ ಕೆ. ಪ್ರಭಾಕರ ಪ್ರಭು 3) ಶ್ರೀ ಮಹಮ್ಮದ್ ಮತೀನ್4) ಶ್ರೀ ಅಬ್ದುಲ್ ಅಜೀಜ್ 5) ಶ್ರೀ ಅಬ್ದುಲ್ ಮುನಾಫ್ 6) ಶ್ರೀ ಎಂ.ಎಸ್. ಪಾಲಾಕ್ಷ 7) ಶ್ರೀ ಸತೀಶ್ ಕುಮಾರ್ ಶೆಟ್ಟಿ 8) ಶ್ರೀ ಆಶೋಕ್ ಶೆಟ್ಟಿ 9) ಶ್ರೀ ಭಾಸ್ಕರ್ ಕೆ.ಎನ್. 10) ಶ್ರೀ ಸಿ.ಎಲ್. ಶ್ರೀಧರ್ 11) ಶ್ರೀ ಕೆ. ಮುರಳೀಧರ 12) ಶ್ರೀ ಡಿ ನಿತ್ಯಾನಂದ, 13) ಶ್ರೀಮತಿ ರೋಶಿನಿ ಭಟ್ 14) ಶ್ರೀ ಎಸ್.ಜೆ.ನಾಯಕ್ 15) ಶ್ರೀ ಎಲ್.ಎಚ್. ಪಟಗಾರ 16) ಶ್ರೀ ಅಬ್ದುಲ್ ರಜಾಕ್, 17) ಶ್ರೀ ಬಿ.ವಿ. ಮೋಹನ್‌ರಾಜ್ 18) ಶ್ರೀಮತಿ ಎನ್.ಜಿ. ನಾರ್ವೇಕರ್ 19) ಶ್ರೀ ಮಂಜೂನಾಥ್ ಮಳಗಿ 20) ಶ್ರೀ ಎಂ.ಎಸ್. ನಾಯಕ್ 21) ಶ್ರೀ ದಿಲೀಫ್ ರೋಖಡೆ

ಆ) ಖಾಸಗಿ ಬಸ್ಸುಗಳನ್ನು ಬಾಡಿಗೆ ಆಧಾರದ ಮೇಲೆ ನಿರ್ದಿಷ್ಟವಾದ ನಿಭಂದನೆಗೊಳಪಟ್ಟು ಪಡೆಯಲಾಗುತ್ತದೆ. ಖಾಸಗಿ ಬಸ್ಸುಗಳನ್ನು ಬಾಡಿಗೆ ಆಧಾರದ

ಮೇಲೆ ಓಡಿಸುವ ಮೊದಲು, ಕರ್ನಾಟಕ ಸರ್ಕಾರದ ಗೆಜೆಟ್ ಹಾಗೂ ದಿನಪತ್ರಿಕೆಗಳಲ್ಲಿ ಟೆಂಡರ್ ವಿವರಗಳನ್ನು ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ಸೂಚನೆ ನೀಡಲಾಗಿತ್ತು.

ಇ) ಬಸ್‌ಗಳು ಸರಿಯಾಗಿ ಓಡಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಎರಡು ಅನುಸೂಚಿಗಳನ್ನು ರದ್ದು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಮಳೆಗಾಲ ಮುಗಿದ ನಂತರ ರದ್ದು ಪಡಿಸಿರುವ ಎರಡು ಅನುಸೂಚಿಗಳನ್ನು ಮೊದಲಿನಂತೆ ಪ್ರಾರಂಭಿಸಲಾಗುವುದು.

640(779) : ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ವತಿಯಿಂದ ಆಲಮಟ್ಟಿ ಜಲಾಶಯ ಹಾಗೂ ಅದರ ಹಿನ್ನೀರಿನಿಂದ ಬಾಧಿತಗೊಂಡವರನ್ನು ಸ್ಥಳಾಂತರಗೊಳಿಸಿರುವ ಬಾಗಲಕೋಟೆ ಪವನಗರದಲ್ಲಿನ ಕೋಲಾರದ ರಸ್ತೆಗಳನ್ನು ಡಾಂಬರೀಕರಣಗೊಳಿಸಲಾಗಿದೆಯೇ;

ಆ) ಡಾಂಬರೀಕರಣಗೊಳಿಸದಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಇ) ಯಾವಾಗ ಈ ಕಾರ್ಯ ಪೂರ್ತಿಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕೋಲಾರ ಪುನರ್ ವಸತಿ ಕೇಂದ್ರ ಮುಖ್ಯ ರಸ್ತೆಗಳಿಗೆ ಕಡಿಕರಣಗೊಳಿಸಿದ್ದು ಈ ಪೈಕಿ ಪ್ರಮುಖವಾದ ಸಂಪರ್ಕಗೊಳಿಸುವ ರಸ್ತೆಗಳಿಗೆ (3.9 ಕಿಮೀ) ಡಾಂಬರೀಕರಣಗೊಳಿಸಲಾಗಿದೆ.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ನಿರ್ಮಿಸಲಾದ ಪುನರ್ ವಸತಿ ಕೇಂದ್ರಗಳಲ್ಲಿ ಆಂತರೀಕ ರಸ್ತೆಗಳಿಗೆ ಡಾಂಬರೀಕರಣ ಮಾಡಿರುವುದಿಲ್ಲ. ಕೇವಲ ಪುನರ್ ವಸತಿ ಕೇಂದ್ರಗಳಿಂದ ಮಾತ್ರ ಡಾಂಬರೀಕರಣ ಮಾಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

641(781) : ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಮತ್ತು ಬಸವನಬಾಗೇವಾಡಿ ತಾಲ್ಲೂಕಿನ ಸುಮಾರು 42,000 ಹೆ. ಪ್ರದೇಶ ಆರ್.ಎಲ್. 590 ನಿಂದ 640 ಆರ್.ಎಲ್. ವರೆಗಿನ ಜಮೀನುಗಳು ನೀರಾವರಿಯಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮುಳುವಾಡ ಏತ ನೀರಾವರಿಯಲ್ಲಿ ಬರತಕ್ಕಂತಹ ಸದರಿ ಜಮೀನುಗಳಿಗೆ ಸರ್ವೆ ಸಮೀಕ್ಷಾ ಕಾರ್ಯ ಕೈಗೊಳ್ಳುವ ಸಲುವಾಗಿ ಹಿಂದಿನ ಭಾರೀ ನೀರಾವರಿ ಸಚಿವರು ಆದೇಶಿಸಿದ್ದು ನಿಜವೇ;